ದಿನಾಂಕ **06-08-2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು ಃ ಪ್ರತಿವಾದಿ ಪರ ವಕೀಲರಿಂದ

ನನ್ನ ತಂದೆಗೆ ಕರಾರುಪತ್ರ ಬರೆದುಕೊಟ್ಟ ಮಾರಾಟಗಾರರು ಆ ಆಸ್ತಿಯನ್ನು ಮಾರಾಟ ಮಾಡಲು ಯಾವುದೇ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂ.562/2026 ರಲ್ಲಿ ಜವರೇಗೌಡ ಮತ್ತು ಲೋಕೇಶ್ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಕಾರಣ ಆ ಆಸ್ತಿಗೆ ಸಂಬಂದ ಇಲ್ಲ. ಸ.ನಂ.106/2 ರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಅವರನ್ನು ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಮತ್ತು ಸ.ನಂ.106/2 ಈಗಲೂ ಸಹ 3 ಮತ್ತು 4 ನೇ ಪ್ರತಿವಾದಿಗಳ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಕಾನೂನನ್ನು ಮರೆಮಾಚಿ ಮತ್ತು ವಿಷಯ ಮರೆಮಾಚಿ ಸುಳ್ಳು ಕರಾರುಪತ್ರ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಪಕ್ಷಗಾರನಲ್ಲ ನಂತರ ನ್ಯಾಯಾಲಯದಿಂದ ನೊಟೀಸ್ ಬಂದ ನಂತರ ಸೇರಿಕೊಂಡಿರುತ್ತೇನೆ. ಸ.ನಂ.106/2ರ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ RSA 1202/2010 ರಂತೆ ಇತ್ಯಾರ್ಥಕ್ಕೆ ಬಾಕಿ ಇರುತ್ತದೆ ಎಂದಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಮತ್ತು ಸ.ನಂ.106/2 ಕ್ಕೆ ಸಂಬಂಧಿಸಿದಂತೆ ಕೆಂಪಮ್ಮನಿಗೆ ಮಂಜೂರಾತಿ ರದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಯಶೋದಮ್ಮ ಸೇರಿಕೊಂಡು ಅಕ್ರಮ ದಾಖಲೆ ಸೃಷ್ಟಿಸಿ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.